◆ **ನೀವು ಹಳ್ಳಿಯಿಂದ ಬಂದವರು. ನಗರದಲ್ಲಿ ಉನ್ನತ ಅಧಿಕಾರಿಯಾಗಿ ಕೆಲಸ ನಿರ್ವಹಿಸಿ ನಿವೃತ್ತರಾದವರು. ಬಾಲ್ಯ ಬಿಟ್ಟರೆ ಉಳಿದ ಜೀವಿತಾವಧಿಯನ್ನು ಬಹುಮಟ್ಟಿಗೆ ನಗರದಲ್ಲೇ ಕಳೆದವರು. ಗಮನಿಸಬೇಕಾದ ಅಂಶವೆಂದರೆ, ನೀವು ಬಾಲ್ಯದ ಅನುಭವ ಅಥವಾ ನೆನಪಿನ ಆಧಾರದ ಮೇಲೆ ಬರೆದ ಕಥೆಗಳು ಹೆಚ್ಚು ವಾಸ್ತವಿಕವಾಗಿಯೂ ಹೆಚ್ಚು ದಟ್ಟವಾಗಿಯೂ ಇವೆ. ಆದರೆ ವ್ಯಕ್ತಿಯಾಗಿ ಹಾಗೂ ಲೇಖಕರಾಗಿ ಬೆಳೆದ ನಂತರದ ಬದುಕನ್ನು ಕುರಿತ ಬರಹಗಳು ಹೆಚ್ಚು ಕಲ್ಪನಾಪ್ರಧಾನವಾಗಿವೆ. ನನಗೆ ಇದೊಂದು ವಿಚಿತ್ರ ಅನ್ನಿಸುತ್ತದೆ.**

ಹಳ್ಳಿಗಾಡಿನ ಬದುಕಿನ ಬಗ್ಗೆ ಬರೆದಾಗ ನನಗೆ ಅದಕ್ಕೆ ಹೆಚ್ಚು ಕಲ್ಪನೆಯನ್ನು ತುಂಬುವುದಕ್ಕೆ ಸಾಧ್ಯವೇ ಆಗಲಿಲ್ಲ. ಆದರೆ ನಗರ ಬದುಕಿನ ಬಗ್ಗೆ ಬರೆಯುವಾಗ ಮನೋಲಹರಿ ಎಲ್ಲಿಂದೆಲ್ಲಿಗೋ ಹರಿಯುವುದು ಸಹಜ. ಏಕೆಂದರೆ, ಇವತ್ತು ನಮ್ಮ ಬದುಕೇ ಹಾಗಾಗಿದೆ. ಜಾಗತೀಕರಣ ಎಲ್ಲ ಕಲ್ಪನೆಗಳನ್ನೂ ಸಹಜ, ವಾಸ್ತವ ಎನ್ನುವಂತೆ ಮಾಡಿದೆ. ನನ್ನ ಕೆಲವು ಕಥೆಗಳಲ್ಲಿ ಎನ್.ಟಿ.ಆರ್., ಗದ್ದರ್ ಮುಂತಾದ ನಿಜಜೀವನದ ವ್ಯಕ್ತಿಗಳು ಬರುತ್ತಾರೆ. ಗದ್ದರ್ ಅವರನ್ನು ನಾನು ಅನೇಕ ಸಲ ಭೇಟಿ ಮಾಡಿದ್ದೇನೆ. ಅವರು ನನ್ನ ಮನೆಗೂ ಬಂದಿದ್ದರು. ಎನ್.ಟಿ.ಆರ್. ಬಗೆಗಿನ ಘಟನಾವಳಿಗಳೂ ಕೂಡ ಕಲ್ಪನೆಯೇನಲ್ಲ. ವಾಸ್ತವವಾಗಿ ನಡೆದಂಥವು. ಅಲ್ಲಿ ಪಾತ್ರಧಾರಿಯಾಗಿ ನಾನು ಇರಲಿಲ್ಲ ಎನ್ನುವುದನ್ನು ಬಿಟ್ಟರೆ ಕಥೆಯಲ್ಲಿರುವುದೆಲ್ಲ ಸತ್ಯ. ಕೆಲವು ಕಥೆಗಳಲ್ಲಿ ನಾನು ಫ್ಯಾಂಟಸಿಯನ್ನೂ ಬಳಸಿದ್ದೇನೆ.

◆ **ನಿಮ್ಮೆಲ್ಲ ಕೃತಿಗಳ ಪೈಕಿ ಅತಿ ಹೆಚ್ಚು ಜನಪ್ರಿಯವಾದದ್ದು 'ಒಕ್ಕಲ ಒನಪು' ಹಾಗೂ 'ಮರೆತ ಭಾರತ'. ಈ ಬರಹಗಳು ನಿಮ್ಮ ಆತ್ಮಕಥಾನಕದ ತುಣುಕುಗಳೂ ಹೌದು, ಪ್ರಬಂಧಗಳೂ ಹೌದು. ಕಥೆಗಳೂ ಹೌದು. ಅವುಗಳಲ್ಲಿ ಅಗಸರ ಅಂಜಿನಪ್ಪ, ತಳವಾರ ತಿಪ್ಪೇರಂಗಯ್ಯ, ಮರಾಠಿಗರ ಚಂದ್ರಪ್ಪ, ಮಾದಿಗರ ಬಸ್ತೆಮ್ಮ, ಹೊಲೆಯರ ಸಿನ್ಗಂಗಮ್ಮ, ತೇಪೆ ಬೂಬಮ್ಮ... ಹೀಗೆ ಗ್ರಾಮೀಣ ಸಮಾಜವು ಸಕಲೆಂಟು ಕುಲ ಜಾತಿ, ಸಂಭ್ರಮ ಸಂಕಟಗಳೊಂದಿಗೆ ತೆರೆದುಕೊಳ್ಳುವ ರೀತಿ ಬೆರಗು ಹುಟ್ಟಿಸುತ್ತದೆ.**

ಅವು ನನ್ನ ಬದುಕಿನ ಕಥೆಗಳು ಎಂಬುದೇನೋ ನಿಜ. ಆದರೆ ಅಲ್ಲಿ ನಾನು ನಿಮಿತ್ತ ಮಾತ್ರ. ನನ್ನ ಬದುಕಿನ ನೆನಪುಗಳಲ್ಲಿ ನನಗಿಂತಲೂ ಹೆಚ್ಚಾಗಿ ನನ್ನ ಊರು, ನನ್ನ ತಂದೆತಾಯಿ, ನಮ್ಮ ಅಕ್ಕಪಕ್ಕದವರು, ಊರ ಹಿರಿಯರು, ಕಿರಿಯರು, ನಮ್ಮ ಮನೆಗೆ ಕೆಲಸಕ್ಕೆ ಬರುತ್ತಿದ್ದ ಆಳುಗಳು, ನನ್ನ ಒಡನಾಡಿಗಳು ಹೀಗೆ ಊರ ಸಮಸ್ತ ಕುಲ–ಕಸುಬುಗಳ ಜನ ಕಾಣಿಸಿಕೊಳ್ಳುತ್ತಾರೆ. ಸಾಮುದಾಯಿಕ ಬದುಕಿನ ಮೊದಲ ಪಾಠವನ್ನು ನಾನು ಕಲಿತದ್ದು ನಮ್ಮ ಹಳ್ಳಿಯಲ್ಲಿಯೇ. ನಮ್ಮಮ್ಮ ತುಂಬಾ ಒಳ್ಳೇ ಹೆಂಗಸು. ಕೈಲಾಗದವರು, ಹಸಿದವರು, ಗತಿಯಿಲ್ಲದವರು ನಮ್ಮ ಮನೆಯ ಬಳಿ ಬರುತ್ತಿದ್ದರು. ಅವರಿಗೆಲ್ಲಾ ನಮ್ಮಮ್ಮ ಮುದ್ದೆ ಬಡಿಸುತ್ತಿದ್ದಳು. ನಾನು ಆ ಪಾತ್ರಗಳ ಬಗ್ಗೆ, ಆ ಬದುಕಿನ ಬಗ್ಗೆ ಬರೆಯುತ್ತ ಆನುಷಂಗಿಕವಾಗಿಯಷ್ಟೇ ನನ್ನ ಬಗ್ಗೆ ಬರೆದುಕೊಂಡಿದ್ದೇನೆ. ಕೆಲವರಿಗೆ ಈ ಬರಹಗಳು ಅಪಾರವಾಗಿ ಮೆಚ್ಚಿಗೆಯಾದರೆ, ಕೆಲವರಿಗೆ ಮುಜುಗರ ಹುಟ್ಟಿಸಿರುವುದೂ ಉಂಟು. ನೋಡಿ, ನಾವೆಲ್ಲ ಚಿಕ್ಕಂದಿನಲ್ಲಿ ಸಿಂಬಳ ನೆಕ್ಕುತ್ತಿದ್ದೆವು; ವಾರಕ್ಕೊಮ್ಮೆ ಮಾತ್ರವೇ ಸ್ನಾನ ಮಾಡುತ್ತಿದ್ದದ್ದು. ಬಹುತೇಕ ಹಳ್ಳಿಗಳಲ್ಲಿ ಆಗ ಇಂಥದೇ ಪರಿಸ್ಥಿತಿ. ಆದರೆ ಈಗ ಯಾವ ಲೇಖಕನೂ ಇಂಥದ್ದನ್ನೆಲ್ಲ ಬರೆಯುವುದಿಲ್ಲ. ಒಂದು ರೀತಿಯ ಸೊಫೆಸ್ಟಿಕೇಷನ್. ನಾನು ಈ ಬರಹಗಳಲ್ಲಿ ಅದನ್ನೆಲ್ಲ ಮೀರಿ ನನ್ನ ಅನುಭವಗಳನ್ನು ಬರೆದೆ. ಅದಕ್ಕೆ ಅಸಾಮಾನ್ಯ ಎನ್ನುವಂಥ ಪ್ರತಿಕ್ರಿಯೆಗಳು ಬಂದವು. ಸಾಮಾನ್ಯ ಓದುಗರಿಂದ ಹಿಡಿದು ಪೂರ್ಣಚಂದ್ರ ತೇಜಸ್ವಿ, ಯಶವಂತ ಚಿತ್ತಾಲ, ಎಚ್ಎಲ್ಕೆ, ಕೋ. ಚನ್ನಬಸಪ್ಪ